ಅಸಲು ದಾವಾ ಸಂಖ್ಯೆ **82 – 2016** ಪಿ.ಡಬ್ಲ್ಯೂ- **1**

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **27.06.2023.**

ಪಾಟೀ ಸವಾಲು ಃ ಶ್ರೀ ಹೆಚ್.ಜೆ.ಯು ನ್ಯಾಯಾವಾದಿಗಳಿಂದ ಃ

ಪ್ರತಿವಾದಿಯು ನನಗೆ ಅಣ್ಣನಾಗಬೇಕು. ನಮ್ಮ ತಂದೆಗೆ ನಾವಿಬ್ಬರೆ ಗಂಡು ಮಕ್ಕಳು ಎಂದರೆ ಸರಿ. ನಾನು ಊರಿನಲ್ಲೇ ವ್ಯವಸಾಯ ಮಾಡಿಕೊಂಡಿದ್ದು, ಪ್ರತಿವಾದಿಯು ಪೋಲೀಸ್ ಕೆಲಸಕ್ಕೆ ಆಯ್ಕೆ ಗೊಂಡಿದ್ದು ಈಗ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸರಿ. ನಾನು ಗ್ರಾಮಪಂಚಾಯಿತಿಗೆ 2 ಬಾರಿ ಸದಸ್ಯನಾಗಿ ಆಯ್ಕೆಯಾಗಿದ್ದೆ ಎಂದರೆ ಸರಿ. ಗ್ರಾಮದಲ್ಲಿ ಯವುದೇ ನಿವೇಶನವು ಹಂಚಿಕೆಯಾಗಬೇಕೆಂದರೆ ಮತ್ತು ಫಲಾನುಭವಿಗಳಿಗೆ ಖಾತೆಯು ವರ್ಗಾವಣೆಯಾಗಬೇಕಾದರೆ ಮತ್ತು ಇತರೆ ಆಸ್ತಿಗಳ ಖಾತೆಯು ವರ್ಗಾವಣೆಯಾಗಬೇಕಾದರೆ ಸಬೆ ಸೇರಿ ನಿರ್ಣಯ ಮಾಡಲಾಗುತ್ತಿತ್ತು ಎಂದರೆ ಸಾಕ್ಷಿಯು ಅರ್ಜಿದಾರರು ತಮ್ಮ ಅರ್ಜಿಯ ಜೊತೆ ದಾಖಲಾತಿಗಳನ್ನು ಸಲ್ಲಿಸುತ್ತಿದ್ದು ಅವುಗಳನ್ನು ಪರಿಶೀಲಿಸಿ ಸಬೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗುತ್ತಿತ್ತು ಎಂದು ನುಡಿಯುತ್ತಾರೆ. ಆಸ್ತಿಗಳ ಚೆಕ್ಕುಬಂದಿಯ ಬಗ್ಗೆ ವಿವಾದ ಉಂಟಾದಲ್ಲಿ ಗ್ರಾಮಪಂಚಾಯಿತಿಯ ಸದಸ್ಯರು ಮತ್ತು ಪಿ.ಡಿಓ ರವರು ಸ್ಥಳಕ್ಕೆ ಹೋಗಿ ವಿವಾದವನ್ನು ಬಗೆಹರಿಸುತ್ತಿದ್ದೆವು ಎಂದರೆ ಸರಿ. ನಾನು ಸ್ಥಳೀಯವಾಗಿ ಲೇವಾದೇವಿಯನ್ನು ನಡೆಸುತ್ತೇನೆ ಎಂದರೆ ಸರಿ. ಸದರಿ ಲೇವಾ ದೇವಿಗೆ ನಾನು ಪರವಾನಗಿಯನ್ನು ಪಡೆದುಕೊಂಡಿರುವುದಿಲ್ಲ ಸಾಕ್ಷಿಯು ಮುಂದುವರಿದು ಕೊಡುವುದು ಮಾಡುವುದಾಗಿ ನುಡಿಯುತ್ತಾರೆ. ಪ್ರತಿವಾದಿಯು ಪೋಲೀಸ್ ಇಲಾಖೆಗೆ ಆಯ್ಕೆಯಾದ್ದರಿಂದ ದಾವಾ ಆಸ್ತಿಗಳನ್ನು ಹಾಗೂ ಇತರೆ ಆಸ್ತಿಗಳನ್ನು ನೋಡಿಕೊಳ್ಳಲು ನನಗೆ ವಹಿಸಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರಿದು ವ್ಯವಸಾಯದಲ್ಲಿ ಬಂದ ಆದಾಯದಲ್ಲಿ ಪ್ರತಿವಾದಿಗೆ ಪಾಲು ಕೊಡುವುದಾಗಿ ನುಡಿಯುತ್ತಾರೆ. ದಿಃ 27.12.1999 ರಂದು ನನ್ನ ಮತ್ತು ಪ್ರತಿವಾದಿಯ ನಡುವೆ ನೋಂದಾಯಿತಿ ವಿಭಾಗ ಪತ್ರವಾಗಿರುತ್ತದೆ ಎಂದರೆ ಸರಿ. ವಿಭಾಗವಾದ ನಂತರವೂ ಸಹ ಪ್ರತಿವಾದಿಯ ಪಾಲಿಗೆ ಬಂದ ಆಸ್ತಿಗಳನ್ನು ನಾನೇ ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಅಸೆಸ್ಮೆಂಟ ನಂ. 17 ರಲ್ಲಿದ್ದ ಮನೆಯು ಪ್ರತಿವಾದಿಯ ಪಾಲಿಗೆ ಬಂದಿದ್ದು ವಿಭಾಗವಾದ ನಂತರವೂ ಸಹ ಸದರಿ ಮನೆಯಲ್ಲಿ ನಾನು ವಾಸವಿದ್ದೆ ಎಂದರೆ ಸರಿ. ಸದರಿ ಮನೆಯ ಎದುರುಗಡೆ ಧನದ ಕೊಟ್ಟಿಗೆಯು ಸಹ ಇತ್ತು ಎಂದರೆ ಸರಿ.

ಸದರಿ ಮನೆಯ ಪಶ್ಚಿಮ ಭಾಗಕ್ಕೆ ಕಾಂಪೌಂಡ್ ಇದೆ ಎಂದರೆ ಸಾಕ್ಷಿಯು ಕಾಂಪೌಂಡ್ ಇರುವುದು ನಿಜ ಆದರೆ ಸದರಿ ಕಾಂಪೌಂಡ್ ಈ ಮೇಲೆ ಹೇಳಿದ ಮನೆ ಮತ್ತು ಅಸೆಸ್ಮೆಂಟ್ ನಂಬರ್ 18 ರಲ್ಲಿರುವ ನಮ್ಮ ಪಾಲಿಗೆ ಬಂದಿರುವ ಮನೆ ನಡುವೆ 12 ಅಡಿ ರಸ್ತೆಗೆ ಬಿಟ್ಟು ಮತ್ತೆ ಸದರಿ ಕಾಂಪೌಂಡ್ ಸದರಿ ಅಸೆಸ್ಮೆಂಟ್ ನಂ. 18 ರ ಮನೆಗೂ ಸಹ ಇರುವುದಾಗಿ ನುಡಿಯುತ್ತಾರೆ. ಅಸೆಸ್ಮೆಂಟ ನಂ. 17 ರ ಮನೆಗೆ ಹೋಗಲು ಈಗ ಅಸೆಸ್ಮೆಂಟ್ ನಂಬರ್ 18 ರಲ್ಲಿ ನಿರ್ಮಿಸಿರುವ ಮನೆಯ ಜಾಗದಲ್ಲೇ ಹೋಗಬೇಕಾಗಿತ್ತು ಎಂದರೆ ಸರಿಯಲ್ಲ. ಸದರಿ ಅಸೆಸ್ಮೆಂಟ್ ನಂಬರ್ 17 ರಲ್ಲಿ ನಿರ್ಮಿಸಿರುವ ಮನೆಗೆ ನಮ್ಮ ತಂದೆಕಾಲದಿಂದಲೂ ಸಹ 12 ಅಡಿ ರಸ್ತೆ ಇರುತ್ತದೆ. ನಾನು ಹೇಳುವಂತೆ ರಸ್ತೆಯು ಇರಲ್ಲಿಲ ಬದಲಿಗೆ ಬಚ್ಚಲು ಮನೆಯು ಇದ್ದು ಸದರಿ ಮನೆ ಮತ್ತು ಅಸೆಸ್ಮೆಂಟ್ ನಂಬರ್ 18 ರ ಮನೆಗೆ ಸೇರಿದ ಹಾಗೆ ಕಾಂಪೌಂಡ್ ಇತ್ತು ಎಂದರೆ ಸರಿಯಲ್ಲ. ಅಸೆಸ್ಮೆಂಟ್ ನಂಬರ್ 17 ರ ಆಸ್ತಿಯು ಪೂರ್ವ ಪಶ್ಚಿಮ 38 ಅಡಿ, ದಕ್ಷಿಣ ಉತ್ತರ 62 ಅಡಿ ಇರುತ್ತದೆ. ಸದರಿ ಅಸೆಸ್ಮೆಂಟ್ ನಂ. 17 ರಲ್ಲಿರುವ ಮನೆಯನ್ನು ನಮ್ಮ ತಂದೆ ಬದುಕಿರುವಾಗಲೇ 1979 ರಲ್ಲಿ ಕಟ್ಟಿಸಲಾಗಿರುತ್ತದೆ. ದಾವಾ ಎ ಷೆಡ್ಯೂಲ್ ಆಸ್ತಿಯು ಪೂರ್ವ ಪಶ್ಚಿಮ 43 ಅಡಿ ದಕ್ಷಿಣ ಉತ್ತರ 51 ಅಡಿ ಇದ್ದು, ಸಾಕ್ಷಿಯು ಮುಂದುವರಿದು 2 ಅಡಿ ಹೆಚ್ಚು ಕಡಿಮೆ ಬರಬಹುದಾಗಿ ನುಡಿಯುತ್ತಾರೆ. ಸದರಿ ವಿಸ್ತೀರ್ಣದಲ್ಲಿ ದಕ್ಷಿಣಕ್ಕೆ 3 ಅಡಿ ನಮ್ಮದೇ ಇದ್ದು, ಉತ್ತರಕ್ಕೆ 2 ಅಡಿ ಜಾಸ್ತಿ ಇರುತ್ತದೆ. ಅಸೆಸ್ಮೆಂಟ್ ನಂಬರ್ 18 ರಲ್ಲಿ ನಿರ್ಮಿಸಿರುವ ಮನೆಯು ಪೂರ್ವ ಪಶ್ಚಿಮ 46 ವರೆ ಅಡಿ ದಕ್ಷಿಣ ಉತ್ತರ 57 ಅಡಿ ವಿಸ್ತೀರ್ಣ ಇರುತ್ತದೆ ಎಂದರೆ ಸಾಕ್ಷಿಯು ಅಳತೆ ಮಾಡಿಲ್ಲದಿರುವುದಾಗಿ ನುಡಿಯುತ್ತಾರೆ. ಸದರಿ ಮನೆಯ ಪಶ್ಚಿಮಕ್ಕೆ 3 ಅಡಿ ಸಾರ್ವಜನಿಕ ಡ್ರೈನೇಜನ್ನು ಒತ್ತುವರಿ ಮಾಡಿಕೊಂಡು ಸಜ್ಜಾವನ್ನು ನಿರ್ಮಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಅದೇ ಜಾಗದಲ್ಲಿ 6 ಅಡಿ ಎತ್ತರಕ್ಕೆ ಕಾಂಪೌಂಡನ್ನು ಸಹ ನಿರ್ಮಿಸಿರುತ್ತೇನೆ ಎಂದರೆ ಸರಿಯಲ್ಲ. ನಾವು ನಿರ್ಮಿಸಿರುವ ಮನೆಯಿಂದಾಗಿ ಪಶ್ಚಿಮ ಮತ್ತು ಉತ್ತರ ದಿಕ್ಕಿನಲ್ಲಿ ಜನರು ಓಡಾಡಲೂ ರಸ್ತೆಯು ಕಿರಿದಾಗಿರುತ್ತದೆ ಎಂದರೆ ಸಾಕ್ಷಿಯು ಉತ್ತರ ದಿಕ್ಕಿಗೆ 18 ಅಡಿ ಜಾಗವನ್ನು ರಸ್ತೆಗೆ ಬಿಟ್ಟಿರುವುದಾಗಿ ನುಡಿಯುತ್ತಾರೆ. ಪಶ್ಚಿಮ ದಿಕ್ಕಿಗೆ ಸಿಮೆಂಟ್ ರಸ್ತೆ ಇದ್ದು ಎಷ್ಟು ಅಡಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸಜ್ಜಾವನ್ನು ನಾವು 1 ವರೆ ಅಡಿಗೆ ನಿರ್ಮಿಸಿರುತ್ತೇವೆ. ಪಶ್ಚಿಮ ಮತ್ತು ಉತ್ತರಕ್ಕಾದಂತೆ ಸಾರ್ವಜನಿಕ ಜಾಗವನ್ನು ಮನೆ ನಿರ್ಮಿಸಿದ್ದರಿಂದ

ಪ್ರತಿವಾದಿಯು ಅದನ್ನು ಪ್ರಶ್ನಿಸಿದಾಗ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ, ಅಸೆಸ್ಮೆಂಟ್ ನಂಬರ್ 17 ರಲ್ಲಿ ಇರುವ ಮನೆಯ ಉತ್ತರ ಬಾಗಕ್ಕಿರುವ ಬಚ್ಚಲು ಮನೆಯನ್ನು ನಾವುಗಳು ವಿಭಾಗವಾಗುವ ಕಾಲದಲ್ಲೇ ಒಡೆದುಹಾಕಲಾಗಿರುತ್ತದೆ. ಸದರಿ ಬಚ್ಚಲು ಮನೆಯನ್ನು ತೆರವುಗೊಳಿಸಿದ್ದರಿಂದ ಸದರಿ ಅಸೆಸ್ಮೆಂಟ್ ನಂಬರ್ 17 ರ ಮನೆಗೆ ಓಡಾಡಲೂ ಅನುಕೂಲವಾಯಿತು ಎಂದರೆ ಸರಿ. ಸದರಿ ಜಾಗವನ್ನು ಹೊರತುಪಡಿಸಿ ಅಸೆಸ್ಮೆಂಟ್ ನಂಬರ್ 17 ರ ಮನೆಗೆ ಓಡಾಡಲೂ ಬೇರೆ ರಸ್ತೆ ಇರುವುದಿಲ್ಲ ಎಂದರೆ ಸರಿ. ಸದರಿ ಬಚ್ಚಲು ಮನೆಯು 12.5 ಅಡಿ ಜಾಗವಿರುತ್ತದೆ ಎಂದರೆ ಸರಿ.ಅಸೆಸ್ಮೆಂಟ ನಂ. 17 ರ 38 ಇಂಟು 62 ರ ವಿಸ್ತೀರ್ಣವು ಬಚ್ಚಲು ಮನೆಯ 12 ವರೆ ಅಡಿಯು ಸಹ ಒಳಗೊಂಡಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸದರಿ 12 ವರೆ ಅಡಿ ಜಾಗವನ್ನು ನಾನು ಮತ್ತು ಪ್ರತಿವಾದಿಯು ಇಬ್ಬರು ರಸ್ತೆಯಾಗಿ ಅನುಭವಿಸಲು ಬಿಟ್ಟು ಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. 1999 ರಲ್ಲಿ ಆದ ನೋಂದಾಯಿತ ವಿಭಾಗ ಪತ್ರದಲ್ಲಿ ಅಸೆಸ್ಮೆಂಟ್ ನಂಬರ್ 17 ರ ವಿಸ್ತೀರ್ಣ 38 ಇಂಟು 62 ರ ಪೂರ್ವಕ್ಕೆ ಬಿದಿ ಮತ್ತು ಗಲ್ಲಿ ಪಶ್ಚಿಮಕ್ಕೆ ಬೀದಿ, ಉತ್ತರಕ್ಕೆ ನನ್ನ ಬಾಬ್ತು ಹಿಸ್ಸೆ ಮನೆ, ದಕ್ಷಿಣಕ್ಕೆ ಬೀದಿ ಇರುತ್ತದೆ ಎಂದರೆ ಸಾಕ್ಷಿಯು ಉತ್ತರಕ್ಕೆ ನಾನು ಮತ್ತು ಪ್ರತಿವಾದಿಯು ಅನುಬೋಗಿಸಲು ಬಟ್ಟಿರುವ ಈ ಮೇಲೆ ಹೇಳಿದ 12 ವರೆ ಅಡಿ ಜಾಗ ಇರುವುದಾಗಿ ನುಡಿಯುತ್ತಾರೆ. ಅದೇ ರೀತಿ ಅಸಸ್ಮೆಂಟ ನಂಬರ್ 18 ರ ವಿಸ್ತೀರ್ಣ 43 ಇಂಟು 51 ರ ಪೂರ್ವಕ್ಕೆ ಗಲ್ಲಿ, ಪಶ್ಚಿಮಕ್ಕೆ ಬೀದಿ, ಉತ್ತರಕ್ಕೆ ಸರ್ವೆ ನಂಬರ್ 23 ರ ಜಮೀನು ದಕ್ಷಿಣಕ್ಕೆ ಪ್ರತಿವಾದಿಯ ಹಿಸ್ಸೆ ಮನೆ ಇರುತ್ತದೆ ಎಂದರೆ ಸಾಕ್ಷಿಯು ದಕ್ಷಿಣಕ್ಕೆ 12 ವರೆ ಅಡಿ ಜಾಗ ಓಡಾಡಲೂ ಬಿಟ್ಟುಕೊಂಡಿರುವುದಾಗಿ ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದು ಸದರಿ ವಿಭಾಗ ಪತ್ರವನ್ನು ಪ್ರತಿವಾದಿಯೇ ಬರೆಸಿದ್ದು ನಾನು ಮತ್ತು ನನ್ನ ಹೆಂಡತಿಯು ಹೋಗಿ ಸಹಿ ಮಾಡಿರುವುದಾಗಿ ನುಡಿಯುತ್ತಾರೆ. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ವಿಭಾಗ ಪತ್ರವನ್ನು ಓದದೆ ಸಹಿ ಹಾಕಿರುತ್ತೇನೆ. ಸದರಿ 12 ವರೆ ಅಡಿಯನ್ನು ತಿರುಗಾಡಲು ನಾವುಗಳು ಬಿಟ್ಟುಕೊಂಡಿರುತ್ತೇವೆ ಎಂದು ಬರೆದಿರುವುದಿಲ್ಲ. 2015 ರಲ್ಲಿ ಪ್ರತಿವಾದಿಯು ನಿವೃತ್ತಿ ಹೊಂದಿ ಊರಿಗೆ ಬಂದು ತಮ್ಮ ಪಾಲಿಗೆ ಬಂದ ಮನೆಯ ಮುಂದೆ ಟಾಯ್ಲೆಟ್ ಪಿಟ್ಟನ್ನು ನಿರ್ಮಾಣ ಮಾಡಲು ಹೊದಾಗ ನಾನು ತೊಂದರೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನನ್ನ ವಿರುದ್ಧ ಸಿಸಿ ಸಂಖ್ಯೆ 299/17 ರಂತೆ ಪ್ರಕರಣವನ್ನು ದಾಖಲಾಗಿರುತ್ತದೆ ಎಂದರೆ ಸಾಕ್ಷಿಯು ನಾನು ಸಹ ಅವರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುವುದಾಗಿ ನುಡಿಯುತ್ತಾರೆ. ನನ್ನ ವಿರುದ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿದ್ದರಿಂದ ಈ ಪ್ರಸ್ತುತ ಸುಳ್ಳು ಪ್ರಕರಣವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಬಿ ಅನುಸೂಚಿಯ ಆಸ್ತಿಯು ಪ್ರತಿವಾದಿಯು ತಮ್ಮ ಅನುಕೂಲಕ್ಕೆ ಬಿಟ್ಟು ಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಸೆಸ್ಮೆಂಟ ನಂಬರ್ 18 ರಲ್ಲಿ ನಿರ್ಮಿಸಿರುವ ಮನೆಯ ಮುಖ್ಯ ಬಾಗಿಲು ಉತ್ತರಕ್ಕೆ ಇದ್ದು ಪಶ್ಚಿಮಕ್ಕೂ ಸಹ ಬಾಗಿಲು ಇರುತ್ತದೆ. ಸದರಿ ಮನೆಗೆ ಗಾಳಿ ಬೆಳಕಿನ ವ್ಯವಸ್ತೆ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ಮೇಲಿನ ಹಳೆಯ ದ್ವೇಷದಿಂದ ಈ ಪ್ರಕರಣವನು ದಾಖಲಿಸಿದದೇನೆ ಎಂದರೆ ಸರಿಯಲ್ಲ. ಸದರಿ ಬಿ ಆಸ್ತಿಯ ಮೇಲೆ ನನಗೆ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಮತ್ತು ಅದರ ಅವಶ್ಯಕತೆಯು ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮನೆಯನ್ನು ನಿರ್ಮಿಸಲು ನಾನು ಪರವಾನಗಿಯನ್ನು ತೆಗೆದುಕೊಂಡಿರುವುದಿಲ್ಲ. ನಾನು 1 ವರೆ ಅಡಿ ಜಾಗವನ್ನು ಅಕ್ರಮಿಸಿಕೊಂಡು ಮನೆಯನ್ನು ನಿರ್ಮಾಣ ಮಾಡಿರುವುದಾಗಿ ಪ್ರತಿವಾದಿಯು ನನ್ನ ವಿರುದ್ಧ ಅಸಲು ದಾವಾ ಸಂಖೆ 212/2013 ರಂತೆ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ